ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 99-104
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಬೇಂದ್ರೆ ಸಾಹಿತ್ಯದಲ್ಲಿ ಕಾವ್ಯ ಮೀಮಾಂಸೆಯ ಚಹರೆ

**ಡಾ. ಕುಮಾರ ಬೆಳಲೆ**

ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಾರ್ಥ ನಗರ, ಮೈಸೂರು.

***Abstract:***

*ದ. ರಾ. ಬೇಂದ್ರೆಯವರ ಸಾಹಿತ್ಯವು ಕನ್ನಡ ಕಾವ್ಯಲೋಕದಲ್ಲಿ ವಿಶಿಷ್ಟವಾದ ಕಾವ್ಯಪ್ರಜ್ಞೆ, ಭಾಷಾ ಸೌಂದರ್ಯ ಮತ್ತು ಜೀವನಾನುಭವಗಳ ಸಮನ್ವಯದಿಂದ ರೂಪುಗೊಂಡಿದೆ. ಅವರ ಕಾವ್ಯಗಳಲ್ಲಿ ಭಾರತೀಯ ಕಾವ್ಯಮೀಮಾಂಸೆಯ ಪರಂಪರೆಯೊಂದಿಗೆ ಆಧುನಿಕ ಕಾವ್ಯಚಿಂತನೆಯ ವಿವಿಧ ನೆಲೆಗಳು ಅಂತರ್ಗತವಾಗಿ ವ್ಯಕ್ತವಾಗುತ್ತವೆ. ರಸ, ಧ್ವನಿ, ಪ್ರತಿಮೆ, ಪ್ರತೀಕ, ಕಲ್ಪನೆ, ಲಯ ಮತ್ತು ಅನುಭೂತಿಗಳ ಮೂಲಕ ಬೇಂದ್ರೆಯವರು ಕಾವ್ಯದ ಸ್ವರೂಪ ಹಾಗೂ ಅದರ ಸೌಂದರ್ಯಾನುಭವವನ್ನು ವಿಶಿಷ್ಟವಾಗಿ ಕಟ್ಟಿಕೊಟ್ಟಿದ್ದಾರೆ. ಅವರ ಕಾವ್ಯಭಾಷೆಯಲ್ಲಿನ ನಾದಮಾಧುರ್ಯ, ರೂಪಕಾತ್ಮಕತೆ ಮತ್ತು ಸಂಕೇತಾತ್ಮಕ ಅಭಿವ್ಯಕ್ತಿ ಕಾವ್ಯಮೀಮಾಂಸೆಯ ಚಹರೆಯನ್ನು ಸ್ಪಷ್ಟಪಡಿಸುತ್ತವೆ. ಜೀವನ, ಪ್ರಕೃತಿ, ಪ್ರೀತಿ, ಮಾನವೀಯತೆ ಮತ್ತು ಆಧ್ಯಾತ್ಮಿಕ ಅನುಭವಗಳು ಅವರ ಕಾವ್ಯದಲ್ಲಿ ಕಾವ್ಯಸೌಂದರ್ಯದ ಪ್ರಮುಖ ನೆಲೆಗಳಾಗಿ ಮೂಡಿಬಂದಿವೆ. ಈ ಅಧ್ಯಯನವು ಬೇಂದ್ರೆ ಸಾಹಿತ್ಯದಲ್ಲಿನ ಕಾವ್ಯತತ್ತ್ವ, ಸೌಂದರ್ಯಪ್ರಜ್ಞೆ ಮತ್ತು ಅಭಿವ್ಯಕ್ತಿಯ ವೈಶಿಷ್ಟ್ಯಗಳನ್ನು ಕಾವ್ಯಮೀಮಾಂಸೆಯ ದೃಷ್ಟಿಕೋನದಿಂದ ವಿಶ್ಲೇಷಿಸುವ ಪ್ರಯತ್ನವಾಗಿದೆ.*

***Keywords:*** *ಬೇಂದ್ರೆ ಸಾಹಿತ್ಯ, ಕಾವ್ಯಮೀಮಾಂಸೆ, ರಸಸಿದ್ಧಾಂತ, ಧ್ವನಿಸಿದ್ಧಾಂತ, ಕಾವ್ಯಸೌಂದರ್ಯ*

## ಪೀಠಿಕೆ

ಭಾರತದಲ್ಲಿ ಸಾಹಿತ್ಯ ಎಂಬುದು ಬದುಕಿನ ಅಂತಃಶಕ್ತಿಯಾಗಿದ್ದು, ಇದರ ಅಂಗಸೌಷ್ಠವ ಕೂಡ ಅಷ್ಟೇ ಅಪೂರ್ವವಾಗಿದೆ. ಇದು ಪ್ರಧಾನವಾಗಿ ಕಲೆ, ಕಾವ್ಯ, ನಾಟಕ, ಸಾಹಿತ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗಳೆಂಬ ಹಲವು ಅಂಗಗಳನ್ನು ಹೊಂದಿದ್ದು, ಇದರಲ್ಲಿ ಅತಿಮುಖ್ಯವಾದುದು ಸಾಹಿತ್ಯ ವಿಮರ್ಶೆಯಾಗಿದೆ. ಈ ಪದವು ವಿಶಾಲಾರ್ಥವನ್ನು ಹೊಂದಿದ್ದು ಬಹುತ್ವವನ್ನಿದು ಒಳಗು ಮಾಡಿಕೊಂಡಿದೆ. "ವಿಮರ್ಶೆಯೆಂದರೆ ಕೇವಲ ಮೌಲ್ಯಮಾಪನವೆಂಬ ಭಾವನೆ ಸ್ವಾಭಾವಿಕವಾಗಿಯೇ ನಮಗೆ ಬರುತ್ತದೆ. ಆದರೆ ಇಂದು ವಿಶೇಷವಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಮರ್ಶೆಯ ಪರಿಕಲ್ಪನೆ ಸಾಹಿತ್ಯ ಅಥವಾ ಕಲೆಯನ್ನು ಕುರಿತಾದ ಯಾವುದೇ ಕಾರ್ಯವನ್ನು ಒಳಗೊಂಡಿದೆ. ಅದು ಕೃತಿ ಸಂಪಾದನಾ ಕಾರ್ಯವಾಗಬಹುದು, ಕೃತಿಯನ್ನು ಕುರಿತು ಬರೆದ ಭಾಷ್ಯವಾಗಬಹುದು, ಅಥವಾ ವಿವರಣೆಯಿರಬಹುದು, ಮೌಲ್ಯಮಾಪನವಿರಬಹುದು ಅಥವಾ ಸಾಹಿತ್ಯ ಸ್ವರೂಪವನ್ನು ಕುರಿತು ಮಾತನಾಡುವ ಕಾವ್ಯ ಮೀಮಾಂಸೆಯಾಗಬಹುದು. ಅಷ್ಟೇಯಲ್ಲದೆ ಒಬ್ಬನ ವಿಮರ್ಶೆಯನ್ನು ಅರ್ಥೈಸುವ, ಖಂಡಿಸುವ ವಿಮರ್ಶೆ" ಎಂದು ವಿಮರ್ಶೆಯ ಪರಿಭಾಷೆಯಲ್ಲಿ ವಿದ್ವಾಂಸರಾದ ಸಿ. ಎನ್.

***Please cite this article as:*** ಕುಮಾರ ಬೆಳಲೆ. (2026). ಬೇಂದ್ರೆ ಸಾಹಿತ್ಯದಲ್ಲಿ ಕಾವ್ಯ ಮೀಮಾಂಸೆಯ ಚಹರೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 99–104

ರಾಮಚಂದ್ರನ್ ಅವರು ಅಭಿಪ್ರಾಯಿಸಿದ್ದಾರೆ. ಇವರ ಮಾತು ಸಾಹಿತ್ಯ ಅವಲೋಕನ ಮತ್ತು ಮಹತ್ವವನ್ನು ವಿಸ್ತರಿಸುತ್ತದೆ.

ಸಾಹಿತ್ಯದ ಮತ್ತೊಂದು ಪ್ರಧಾನ ನೆಲೆ ಕಾವ್ಯಮೀಮಾಂಸೆ. ಹಾಗಾಗಿ ಇದಕ್ಕೆ ಸಂಬಂಧಪಟ್ಟ ತಾತ್ವೀಕ ಜಿಜ್ಞಾಸೆಗಳನ್ನು ನೋಡೋಣ. ಸಂಸ್ಕೃತ ಮತ್ತು ಕನ್ನಡ ಕಾವ್ಯಮೀಮಾಂಸಕರು ನಿರಂತರವಾಗಿ ಕಾವ್ಯಮೀಮಾಂಸೆಯ ಬಗೆಗೆ ನಿರಂತರವಾಗಿ ಧನಾತ್ಮಕ ಚರ್ಚೆ ನಡೆಸುತ್ತಾ ಬಂದಿರುವರು. ಅವರಲ್ಲಿ ಮೊದಲಿಗರಾಗಿ ಸಂಸ್ಕೃತದ ಭರತ ಕಾಣಿಸಿಕೊಂಡರೆ, ಕೊನೆಯವರಾಗಿ ಜಗನ್ನಾಥ, ವಿಶ್ವನಾಥ, ಅಪ್ಪಯ್ಯದೀಕ್ಷೀತರು ವಿರಾಜಮಾನರಾಗುತ್ತಾರೆ. ಹೀಗಿರುವಾಗ ನಂತರದಲ್ಲಿ ಕನ್ನಡದ ಸಮಗ್ರ ಕೃತಿಯ ಅನ್ವಯಿಕತೆಗೆ ಪಾಶ್ಚಾತ್ಯರು ಮುನ್ನಡೆದರು. ಇದಷ್ಟೇಯಲ್ಲದೆ ಮುಂದೆ ಕನ್ನಡದ ನವೋದಯ ಕವಿಗಳು ಕಾವ್ಯಮೀಮಾಂಸೆ ಮತ್ತು ಸಾಹಿತ್ಯವಿಮರ್ಶೆ ಇವೆರಡನ್ನು ಸಮಾನವಾಗಿ ಸ್ವೀಕರಿಸಿ ಕಾವ್ಯಮೀಮಾಂಸೆಯ ಚಿಂತನೆಗಳನ್ನು ಪ್ರಖರವಾಗಿ ನಡೆಸಿದರು. ಅವರಲ್ಲಿ ಕನ್ನಡದ ಹಿರಿಯ ನೆಲಮುಗಿಲ ಕವಿ ದ. ರಾ. ಬೇಂದ್ರೆಯವರು ಪ್ರಮುಖರೆನಿಸಿರುವರು.

ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ನವೋದಯ ಯುಗದ ಮಾಂತ್ರಿಕ ಶಕ್ತಿಯೊಂದಿಗೆ ಕವಿಯಾಗಿ, ನಾಟಕಕಾರರಾಗಿ, ವಿಮರ್ಶಕರಾಗಿ, ಅನುವಾದಕರಾಗಿ ಕನ್ನಡದ ತೇರು ಎಳೆದು ಕನ್ನಡ ಕಾವ್ಯಮೀಮಾಂಸೆಯ ಹಿನ್ನಲೆಯಲ್ಲಿ ಕನ್ನಡಿಗರ ಹೃನ್ಮನದಲ್ಲಿ ಸೇರಿದರು. ಇವರಿಗೆ ಬೆಂದರೆ ಬೇಂದ್ರೆಯಾದೆನು, ಬೇಂದ್ರೆಗೆ ಬೇಂದ್ರೆಯೇ ಸಾಟಿ, ಗಾರುಡಿಗ ಕವಿ, ನಾದದ ನವನೀತವನ್ನು ಊದುವ ಕವಿ ಎಂಬೆಲ್ಲ ಉಕ್ತಿಗಳಿವೆ.

ಆಧುನಿಕ ಯುಗದ ದ್ರಷ್ಟಾರ, ಯುಗದ ವಾಣಿ ಎಂದು ಪ್ರಸಿದ್ಧಿ ಪಡೆದ ಬೇಂದ್ರೆಗೆ ಮಿಡಿಯದ ಭಾವವಿಲ್ಲ, ಜೀವವಿಲ್ಲ. ರೂಪವೆತ್ತದ ಆಸೆಯಿಲ್ಲ, ಸ್ಫೋಟವಾಗದ ನೋವಿಲ್ಲ, ನಲಿವಿಲ್ಲ. ಇವರ ಜೀವನ ಕಾವ್ಯ ಮೀಮಾಂಸೆಗೆ ತಂತಿಯೂ ಬೇಡ, ತಾಳವೂ ಬೇಡ. ಇವರ ಕಾವ್ಯ ಮೀಮಾಂಸೆ ಕಲ್ಪನೆಯು ಹಾಲಿನ ಮಳೆಯಂತೆ, ಜೇನಿನ ಹೊಳೆಯಂತೆ ಮಥಿಸಿದಷ್ಟು ಅಮೃತದ ಹೊನಲು. ಕಾವ್ಯ ಕಲ್ಪನೆ ಜೀವಪರವಾಗಿದ್ದು, ಗಂಭೀರ ಸುಂದರವಾಗಿದೆ. ಅಂತೆಯೇ ಎಷ್ಟೇ ಸುಕುಮಾರವಾಗಿದ್ದರೂ ಒರಟು, ಒಗರು ಕೂಡ ಅಲ್ಲಲ್ಲಿ ಅರಳುತ್ತವೆ.

"ಕಾವ್ಯವು ಮಿದುವಾಗಿದ್ದು ಹಸನು ಕೂಡ ಆಗಿದೆ. ಅದು ಸರ್ವ ಗ್ರಾಹಿ... ಸರ್ವಂಕಷ. ಬೇಂದ್ರೆಯಂಥ ಕವಿಯನ್ನು ಯುಗದ ಕವಿಯಾಗಿ ಪಡೆದ ಆಧುನಿಕ ಕನ್ನಡ ಕಾವ್ಯ ಕೃತಾರ್ಥವಾಯಿತು" ಎಂಬ ಅಡಿಗರ ಮಾತು ಬೇಂದ್ರೆಯವರ ಕಾವ್ಯ ಮೀಮಾಂಸೆ ಕಲ್ಪನೆಯನ್ನು ತಿಳಿಸಿರುವುದರೊಂದಿಗೆ ಅವರ ಕಾವ್ಯ ಮೀಮಾಂಸೆ ಚೆಂದವಿರುವುದನ್ನು ಮನದಟ್ಟು ಮಾಡುತ್ತದೆ.

ಸೃಜನಶೀಲ ಸಾಹಿತ್ಯವನ್ನು ಸೃಷ್ಟಿಸಿದ ಬೇಂದ್ರೆ ಕೌತುಕದ ಕವಿಯಾಗಿರುವರು. ಇವರಿಗೆ ಜಗದೊಳಗಿರುವ ಜೀವನ ಮರ್ಮ, ಜೀವರುಗಳ ಹಪಹಪಿಕೆ, ಸುಖ, ದುಃಖ, ನೋವು, ನಲಿವು, ಕಾವ್ಯ ಕುತೂಹಲ ಅಪಾರ. ಇವರು ಕಾವ್ಯ ತತ್ತ್ವ ಮತ್ತು ವಿಮರ್ಶೆಗಳೆರಡರಲ್ಲೂ ಅಪಾರ ಸಾಧನೆ ಮಾಡಿದವರು. ಇದಕ್ಕೆ ಸಂಬಂಧಿಸಿ ಅವರು ಬರೆದ ಕೃತಿಗಳಾಗಿ, ವಿಚಾರ ಸಾಹಿತ್ಯ ಮತ್ತು ವಿಮರ್ಶೆ, ಸಾಹಿತ್ಯ ಸಂಶೋಧನೆ, ಜೈಮಿನಿ ಭಾರತಕ್ಕೆ ಮುನ್ನುಡಿ, ಮಹಾರಾಷ್ಟ್ರ ಸಾಹಿತ್ಯ, ಕಾವ್ಯೋದ್ಯೋಗ, ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕರತ್ನಗಳು, ಮಾತೆಲ್ಲ ಜ್ಯೋತಿ, ಸಾಹಿತ್ಯ ವಿರಾಟ್ ಸ್ವರೂಪ, ಕುಮಾರವ್ಯಾಸ ಮುಂತಾದವುಗಳಾಗಿವೆ.

ಕಾವ್ಯ ರಚನಾಕಾರ ಶ್ರೇಷ್ಠ ಸಾಹಿತಿಯಾಗಿರುವಂತೆ ಅವನೊರ್ವ ವಿಮರ್ಶಕನೂ ಕೂಡ ಆಗಿರುತ್ತಾನೆ ಎಂಬ ಮಾತು ಇವರಿಗೆ ಒಪ್ಪುವ ಮಾತು. 'ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೇ ನೀಡುವೆನು ರಸಿಕ ನಿನಗೆ' ಎಂದು ಸಾಹಿತ್ಯಕ್ಕೆ ಮುನ್ನುಡಿಯಿಟ್ಟ ಬೇಂದ್ರೆ ಓರ್ವ ಕವಿಯಾಗಿ, ವಿಮರ್ಶಕರಾಗಿ

ಗುರುತಿಸಿಕೊಂಡರು. ಇವರ ಎಲ್ಲ ಕೃತಿಗಳಲ್ಲಿ ಕವಿ, ಕಾವ್ಯ ದೃಷ್ಟಿಯಿದ್ದು ಸಹೃದಯನ ಆತ್ಮ ಶ್ರೀಯನ್ನು ಬಡಿದು ಎಚ್ಚರಿಸುವ ಗುಣವಿದೆ.

ಕಾವ್ಯ ಜಿಜ್ಞಾಸೆಯ ಕ್ರಮದಲ್ಲಿ 'ಶಬ್ದಾರ್ಥ ಸ್ವರೂಪವೇ ಕಾವ್ಯ ಕೇಳಣ್ಣಾ' ಎನ್ನುವ ಮೂಲಕ ಕಾವ್ಯದ ಅಭಿವ್ಯಕ್ತಿ ಮೂಲವನ್ನು ತಿಳಿಸಿ, ಸಂಸ್ಕೃತ ಕಾವ್ಯ ಮೀಮಾಂಸೆಯ ಭಟ್ಟತೌತ, ಕುಂಥಕ ಇತ್ಯಾದಿ ವೈಯಾಕರಣಿಗಳನ್ನು ಸ್ಮರಿಸಿ ಕಾವ್ಯದ ಚಿಂತನೆಯನ್ನು ಮತ್ತಷ್ಟು ವಿಸ್ತರಿಸಿರುವರು.

ಕಾವ್ಯ ಸೃಷ್ಟಿ ಎನ್ನುವುದು ಕೇವಲ ಕಲ್ಪನಾ ವಿಲಾಸವಲ್ಲ, ಶಬ್ದ ಜೋಡಣೆಯಲ್ಲ, ಅದು ಸಹಜವಾಗಿ ಬರುವ ಭಾವದ ಉಕ್ಕಂದ. ಮಾತು ಮಾತು ಮಥಿಸಿ ಬಂದ ನಾದದ ನವನೀತ ಎನ್ನುವ ಮೂಲಕ ಕಾವ್ಯವೆಂಬುದು ಕೇವಲ ಸಂಜ್ಞೆಯೂ ಅಲ್ಲ. ವ್ಯವಹಾರವೂ ಅಲ್ಲ, ಅದೊಂದು ಸಂಬಂಧ ಮತ್ತು ಇರುವಿಕೆಯ ಮೂಲವೆಂದರು.

ಕಾವ್ಯ ನಮ್ಮೆಲ್ಲರ ಕರುಳಿನ ಮೂಲ. ದೇಹ, ಮನಸ್ಸುಗಳ ಸಾಂತ್ವನದ ಭೇರಿ. ಜೋಗುಳದ ಕುಡಿ. ಬಿಸಿಗೆ ತಣ್ಣೀರು ಬೆರಸಿದ ಹದ. ಚೈತನ್ಯದ ಜೀವನ ಮೃದಂಗ. ನಾದಸ್ವರೂಪಿ. ಓಂಕಾರರೂಪಿ ಮತ್ತು ಸಲೀಲಾ ರೂಪ. ಹೀಗಾಗಿ ಬೇಂದ್ರೆಯವರ ಕಾವ್ಯಾನುಭೂತಿ ಕೇವಲ ಶೂನ್ಯವಾಗದ ಭಾವಲೋಕ. ಸಹೃದಯಲೋಕ. ಇದಕ್ಕೆ ಅನ್ವಯಿಕವಾಗುವ ಪದ್ಯ,

***"ಸಂಖ್ಯೆಯೆಂಬುದು ಆಕೃತಿಯ ಭಾಷೆ***
***ಆಕೃತಿಯೆಂಬುದು ಸಂಖ್ಯೆಯ ಆಸೆ***
***ಸಂಖ್ಯಾಕೃತಿಯಲಿ ಗುಣ ಮೈದೊರೆ***
***ಕ್ರಿಯಶೀಲವಾಯಿತು ಆ ಹೋರೆ***
***ಈ ಅರ್ಥಕೆ ಪದ ಹೊಂದಿರಲು***
***ವಾದ ಧ್ವನಿಯಲಿ ಭಾವವು ತುಂಬಿ***
***ಹೊಳೆಯುವುದು ಒಳಗಣ್ಣಿಗೆ ಆ ಗೊಂಬಿ"***

***"ದೇಹವೊಂದು ದೇವವೀಣೆ***
***ನರನರವೂ ತಂತಿ ತಾನೆ***
***ಹಗಲಿರುಳೂ ಮಿಡಿಯಲಿಹ ಉಸಿರಾಟವೆ ಗೀತೆ***
***ಅದ ಬಾರಿಸೆ ನೀ ಪ್ರವೀಣೆ ತಾಯಿ ನಿನ್ನ ಕೈಗೆ ನಾನೆ***
***ಒಪ್ಪಿಕೊಂಡಿಹೆನು ಬರಲಿ ಜೀವದ ಸಂಗೀತ"***

ಕಾವ್ಯ ಸೃಷ್ಟಿಯನ್ನು ಕಾವ್ಯಯೋಗವೆಂದು ಭಾವಿಸಿದ ಬೇಂದ್ರೆಯವರು ಕಾವ್ಯ ಕ್ರಿಯೆಯ ಫಲವನ್ನು ಭಿತ್ತಿ, ಮೊಳಕೆಯ ಭಿತ್ತಿಗೆ ಸಾಧಕವಾಗುವ ಸನ್ನಿವೇಶವನ್ನು ನಿರೂಪಿಸಿ, ಕಾವ್ಯವೆಂಬ ಶಬ್ದವು ಅರ್ಥರೂಪವಾದ ನಿಲುವನ್ನು ವಿವೇಚಿಸಿರುವರು. ಆ ಮೂಲಕ ಕಾವ್ಯವನ್ನು ಶ್ರವ್ಯ ರೂಪವಾಗಿ ಮಾಡಿ ಕಾವ್ಯಾನಂದವನ್ನು ರಸ ಪ್ರವಾಹವಾಗಿ ನೀಡಿರುವರು. ಕಾವ್ಯ ಯೋಗ ಪರಿಕಲ್ಪನೆಯಲ್ಲಿ ಕಾವ್ಯವೆಂಬುದನ್ನು ಸಹೃದಯರ ಮನದಲ್ಲಿ ವೈಯಕ್ತಿಕತೆಯೊಂದಿಗೆ ನಿರಶನಗೊಳಿಸಿ ಸಾಕಾರ ಮಾಡಿರುವುದು ವಿಶೇಷ. ಬೇಂದ್ರೆಯವರು ಕವಿತೆಯ ಮೂಲಕ ಕಾವ್ಯ ಚಿಂತನೆಯನ್ನು ಲಕ್ಷಿಸುವುದರೊಂದಿಗೆ ಕಾವ್ಯ ಶೋಧವನ್ನು ಮಾಡಿದ ಮಹತ್ವದ ಕವಿಗಳಲ್ಲಿ ಶ್ರೇಷ್ಠರಾಗಿರುವರು. ಇಂತಹ ಮಹತ್ವದ ಕವಿ ಇಂದು ನಮ್ಮೊಟ್ಟಿಗೆ ವಿರಳ, ಅಪರೂಪ.

ಕವಿಯು ಕವಿತೆಯ ರಚನೆಯಲ್ಲಿ ತೊಡಗುವುದು ಒಂದು ತಪಸ್ಸು. ಇದು ಅವನ ಹಲವು ಯೋಗಗಳಲ್ಲೊಂದು. ಕವಿತೆಯ ರಚನೆಯನ್ನು ಕಾವ್ಯ ಯೋಗ ಎಂದ ಬೇಂದ್ರೆಯವರು ಸಾಹಿತ್ಯ ವಿರಾಟ್ ಸ್ವರೂಪ ಕೃತಿಯ ಪೂರ್ವಬಾಗದಲ್ಲಿ ಹೀಗೆ ಹೇಳಿದ್ದಾರೆ "ಪ್ರೇಮವನ್ನು ಸ್ವಯಂತೃಪ್ತಿ ಮತ್ತು ಪರದ್ವೇಷಗಳಿಂದ ಬಿಡಿಸಿ ಶುದ್ಧಗೊಳಿಸಬೇಕು. ಸುಖ, ದುಃಖ, ಉಪೇಕ್ಷೆಗಳಿಂದ ನಿರ್ಲಿಪ್ತವಾಗಬಹುದಾದ ಆನಂದನ ಕನಕ ಕಿಂಡಿಯನ್ನು ಕಂಡುಕೊಳ್ಳಬೇಕು. ಆವೃದ್ದಿ, ಮರಣ ಇತ್ಯಾದಿ ಇದೇ ಜೀವನವಲ್ಲವೆಂಬ ಅರಿವು ಕಣ್ತೆರೆಯಬೇಕು. ಇಂಥ ಜ್ಞಾನ ಶಕ್ತಿಯ ಹದದಲ್ಲಿ ಭಕ್ತಿ ಕಾಮವು ಬಾಳನ್ನೆ ಕೃತಾರ್ಥತೆಯ ಪರಿಪಾಕದ ರಸ ಶಾಲೆಯನ್ನಾಗಿ ಮಾಡೀತು. ಕಾವ್ಯವು ಕರ್ಮ; ಅದು ಪುರುಷಾರ್ಥ ಪೂರ್ಣವಾಗಲಿ; ಬರಿ ಪ್ರಕೃತಿ ವಿಲಾಸವಾಗದಿರಲಿ ಎಂಬುದೇ ಕಾವ್ಯೋದ್ಯೋಗ. ಕಾವ್ಯ ಯೋಗವೆಂದರೆ ಕವಿಯ

ಕರ್ಮಯೋಗ. ಲೋಕ ಸಂಗ್ರಹದ ಇಚ್ಛೆಯಂತೆ ಜಗತ್ತಿನ ಕಲ್ಯಾಣಕ್ಕಾಗಿ ಕುಶಲತೆಯಿಂದ ಮಾಡಿದ ಕೆಲಸವದು. ಸಹೃದಯರಿಗೆ ಆನಂದವನ್ನು ತಣಿಸಲು ಇರಿಸಿದ ಅರವಟ್ಟಿಗೆ ಕಾವ್ಯ."

ಸಂಸ್ಕೃತ ಕಾವ್ಯ ಮೀಮಾಂಸಕರು ಸಮಾಧಿ ಎನ್ನುವ ಪದವನ್ನು ಕಾವ್ಯದೊಂದಿಗೆ ಸಮೀಕರಿಸಿ ಕಾವ್ಯ ಸಮಾಧಿ ಶಬ್ಧವನ್ನು ಬಳಸಿದರೆ, ಯೋಗವೆಂಬ ಪದವನ್ನು ಕಾವ್ಯದ ಜೊತೆ ಪ್ರಯೋಗಿಸಿದ ಕನ್ನಡದ ವಿಶಿಷ್ಟ ಮೀಮಾಂಸಕ, ಮೊದಲ ಕವಿ ಬೇಂದ್ರೆ. ಭಗವದ್ಗೀತೆಯಲ್ಲಿ ಕರ್ಮ ಯೋಗ, ಭಕ್ತಿಫಲ ಮುಂತಾದವುಗನ್ನು ಕೇಳಿದ್ದೇವೆ. ಅದರಂತೆ ಕಾವ್ಯ ಯೋಗವು ಕವಿಯಲ್ಲಿ ಅಂತರಾತ್ಮಗೊಂಡು ಕಾವ್ಯ ಮುಖೇನ ಪ್ರಜ್ವಲಿಸಿ ಸಹೃದಯನ ಭಾವವನವೆಂಬ ಹೃದಯದಲ್ಲಿ ರಸದ ಮಡುವಾಗಿದೆ. ಇದು ಸಾಹಿತ್ಯ ವಿರಾಟ್ ಸ್ವರೂಪ ಕೃತಿಯ ಸಾರ.

ಕವಿಯ ಇರುವಿಕೆಯನ್ನು ಬೇಂದ್ರೆಯವರು ದ್ರಷ್ಟಾರ, ಸೃಷ್ಟಾರ ಎಂದು ಗುರುತಿಸುತ್ತಾರೆ. ದೃಷ್ಟಿ ಮತ್ತು ಸೃಷ್ಟಿಗಳೆರಡು ಕವಿಯ ಕ್ರಿಯ ಸೂಚಕ. ದೃಷ್ಟಿಯಿಂದ ಮಾಧುರ್ಯ, ಸೃಷ್ಟಿಯಿಂದ ಕೃತಿ ಆವಿರ್ಭವಿಸುತ್ತದೆ. ಇನ್ನು ಇವೆರಡರ ಸಂಗಮ ಕಾವ್ಯ. ಶ್ರುತಿಯ ಕಾಣ್ಕೆಯನ್ನು ದರ್ಶನವೆಂದು ತಿಳಿಸುವ ಮೂಲಕ ಬೇಂದ್ರೆಯವರು "ದೃಷ್ಟಿ ಶುದ್ದ ಸ್ವರೂಪದ್ದಾದರೆ, ಸೃಷ್ಟಿಯ ರೂಪ ಮಿಥ್ಯೆವಾದುದು. ದರ್ಶನದ ಅಧಿಷ್ಠಾನ ದೃಷ್ಟಿಯಾದರೆ, ಕೃತಿಯ ಆಧಾರ ಸ್ಮೃತಿಯಾಗಿದೆ. ಇದರಲ್ಲಿ ದೃಷ್ಟಿ ಮತ್ತು ಕೀರ್ತನೆ, ಸೃಷ್ಟಿಯ ವರ್ಣನೆಗಳಾಗಿವೆ." ಇವರು ಕೀರ್ತನೆ ಪದವನ್ನು ಕಾವ್ಯದ ಭಗವಾನ್ ವಾಣಿ, ಸರಸ್ವತಿಯ ವಾಕ್ ಎಂಬ ಅರ್ಥಗಳು ಬರುವಂತೆ ಹೊಳೆಯಿಸಿರುವುದು ವಿಶೇಷವಾಗಿದೆ.

"ಕವಿ ತನ್ನ ಶಕ್ತಿಯಿದ್ದಷ್ಟು ಮಾತ್ರ ದರ್ಶನವನ್ನು ಕೃತಿಯಲ್ಲಿ ಮೂಡಿಸಬಲ್ಲ. ದರ್ಶನ, ಪ್ರಕೃತಿ, ಪುರುಷ, ದೈವೀಕತೆ ಇವೆಲ್ಲವನ್ನು ಒಳಗೊಳ್ಳುವ ಅಂತರ್ ದೃಷ್ಟಿಯ ಫಲವಾದ್ದರಿಂದ ಕವಿ ವಿಶ್ವರೂಪ ದರ್ಶನಕಾರನಾಗುತ್ತಾನೆ. ದೃಷ್ಟಿಯಿಂದ ಸೃಷ್ಟಿ ಆದ್ದರಿಂದ ದ್ರಷ್ಟಾರವಾಗದೆ ಕವಿ ಸೃಷ್ಟಾರನಾಗಲಾರ." (ಭುವನದ ಭಾಗ್ಯ, ಪುಟ258) ಕಾವ್ಯದ ಗುರಿಯು ಆನಂದ ಎನ್ನುವುದನ್ನು ಒಪ್ಪಿದ ಬೇಂದ್ರೆ "ನಾವು ಹೆಣೆದ ಹಾರ, ಮಾಟವಲ್ಲ; ನಾವೇ ಹೂಡಿದ ಆಟ ಎಂದು ತೋರಿಸುವುದೇ ಕವಿಯ ಮಾತಿನ ಕುಸುರಿ ಎನ್ನುವ ಮೂಲಕ ಭ್ರಮೆಯ ಬಂಧನದೊಳಗಿಂದ ಬಿಡಿಸಿ ನಮ್ಮನ್ನು ಹಿಗ್ಗಿಸುವುದು ಕಾವ್ಯ ಯೋಗ ಎಂದರು. ಹೀಗಾಗಿ ತಾನೇ ಹಿಗ್ಗದ ಕವಿಯು ಬೇರೆಯವರನ್ನು ಹಿಗ್ಗಿಸುವುದೆಂತು ಎಂದು ಕವಿವರ್ಯರುಗಳನ್ನು ಪ್ರಶ್ನಿಸುವರು. ಮುಂದುವರಿದು ಕವಿಗೆ ಎರಡು ಯೋಗಗಳಿವೆ. ಮೊದಲನೆಯದು; ತನ್ನದು, ತನ್ನೊಳಗಿನದು. ಎರಡನೆಯದು; ಹೆರರಿಗಾಗಿ, ಹೊರಗಿನದು ಎಂದಿದ್ದಾರೆ. ಇವುಗಳಲ್ಲಿ ಒಂದು ಆತ್ಮ ಯೋಗ; ಇನ್ನೊಂದು ಲೀಲಾ ಯೋಗವಾಗಿದೆ."

ಕಾವ್ಯ ಅಥವಾ ಕಲೆ ಕವಿಯ ಸೃಷ್ಟಿಯಾಗಿದೆ. ಅದೊಂದು ಜೀವನದ ಪ್ರತಿಬಿಂಬವಾಗಿದೆ ಎಂದ ಬೇಂದ್ರೆ ಮಾನವನರನ್ನು, ಅವರ ಜೀವನ ಕ್ರಮವನ್ನು ಭ್ರಮೆಗಳಿಂದ ಆಚೆ ತಂದು ಅವರಿಗೆ ವಾಸ್ತವತೆಯನ್ನು ತಿಳಿಸುವ ಮೂಲಕ ಎಚ್ಚರದ ಶಕ್ತಿಯಾಗಿ ಕಾವ್ಯ ಯೋಗವನ್ನು ಪ್ರಯೋಗ ಮಾಡಿದ್ದಾರೆ. ಈ ಕಾವ್ಯ ಯೋಗದ ಮೂಲಕವೇ ಕವಿಯ ಕರ್ತವ್ಯ, ಅವನ ಕಾವ್ಯ ಸ್ವರೂಪ, ಲಕ್ಷಣ, ಪರಮ ಗುರಿ ಮುಂತಾದವುಗಳನ್ನು ಅನ್ವೇಷಿಸಿದವರು ಬೇಂದ್ರೆ.

ಕವಿಯೊರ್ವನಿಗೆ ಅಂತರ್ ದೃಷ್ಟಿ ಮತ್ತು ದರ್ಶನ ಶುದ್ದತೆಯಿರಬೇಕು. ಅವನ ಕಾವ್ಯ ವರ್ಣನೆ ಸಹಿತವಾಗಿದ್ದರೂ ಮುಗ್ದನಲ್ಲಿ ಎಚ್ಚರ ತರುವಂತಿರಬೇಕು. ಲೋಕ ರಸಿಕನಾದ ಕವಿ ಶಬ್ದ ಕಸುವುವಿರುವ ನಾವಿಕ ಮತ್ತು ಕಲೆಗಾರನಾಗಿರುತ್ತಾನೆ. ಅವನು ಪ್ರಕೃತಿಯನ್ನು ಕಾವ್ಯಕಲೆಯಾಗಿ ಅರಳಿಸಿ ಅದರಲ್ಲಿ ಸಾಮಾಜಿಕ ರಸಗಳನ್ನು ದರ್ಶನವಾಗಿಸುತ್ತಾನೆ. ಇದು ಅವನ ಕರ್ತವ್ಯವೂ ಆಗಿರುತ್ತದೆ. ಉದಾಹರಣೆಗೆ: ಮಂಡೋದರಿ ದುಃಖವನ್ನು, ವಿಶ್ವಾಮಿತ್ರನ ಕೋಪವನ್ನು,

ತಿರುಕೊಳನಾಚಿಯ ನೋವನ್ನು, ಚಂದ್ರಮತಿಯ ದುಃಖವನ್ನು ಸಹೃದಯನದು ಆಗಿಸಿ, ಅವನೊಳಗೆ ಇದು ನನ್ನ ನೋವು, ಇದು ನನ್ನ ಕಥೆಯೆನ್ನುವಂತೆ ಮಾಡುವುದೇ ಕವಿ ಕರ್ಮವಾಗಿದೆ ಎಂದರು.

ಕರ್ಮವೇ ಕವಿಯೋರ್ವನ ದರ್ಶನವಾದರೂ ತನ್ನ ಕಾವ್ಯದೊಳಗೆಲ್ಲ ಮಾನವರ ಸಂಬಂಧಾತ್ಮಕ ಗಾಥೆಗಳನ್ನು, ಘಟನೆಗಳನ್ನು, ನಡವಳಿಕೆಗಳನ್ನು ತರುವುದರ ಮೂಲಕ ಸಹೃದಯನ ಹೃದಯಕ್ಕೆ ತಂಪು ಮಾಡಿ ಅವನನ್ನು ವಿವೇಚನೆಯತ್ತ ಕರೆದುಕೊಂಡು ಹೋಗುತ್ತಾನೆ. ಇದನ್ನು ಬೇಂದ್ರೆಯವರು ತಮ್ಮ ಕಾವ್ಯಗಳಲ್ಲಿ ಮೂಡಿಸಿ ಕಾವ್ಯ ಕಲ್ಪನೆ ಮತ್ತು ಮೀಮಾಂಸೆ ಹೀಗಿರಬೇಕು ಎಂದಿರುವರು.

ಒಳ್ಳೆಯ ಕಾವ್ಯದ ಬಗೆಗೆ ಮಾತನಾಡುವ ಬೇಂದ್ರೆ ಅವರು ಕವಿ ಹೃದಯವನ್ನು ಓದುಗರಿಗೆ ತಿಳಿಯುವಂತೆ ಮಾಡುವುದು ನೈಜ ಕಾವ್ಯವೇ ಹೊರತು ಶುಷ್ಕ ಕಾವ್ಯವಲ್ಲ ಎಂದರು. ಕವಿಯನ್ನು ಅವರು ನಿಜ ಕವಿ ಎನ್ನುವ ಮೂಲಕ ಅವನ ಸೌಂದರ್ಯ ಪ್ರಜ್ಞೆಯನ್ನು, ಅವನ ನಿಲುವುಗಳನ್ನು ಪ್ರಸ್ತಾಪಿಸಿ ಅವನಲ್ಲಿರುವ ಆರಾಧಕ ಗುಣ, ಸಾಮಾಜಿಕ ಬದ್ಧತೆ ಮತ್ತು ಅತಿರೇಕಗಳನ್ನು ಹೊರಿಸುವ ಮತ್ತು ಇಳಿಸುವ ಹೊಣೆ ಕಾವ್ಯದ್ದೇ ಆಗಿರುತ್ತದೆ ಎಂದರು. ಕಾವ್ಯ ವರ್ತಮಾನ ಸಂಗತಿಗಳನ್ನು, ಭೂತಕಾಲದ ಅನುಭವಗಳನ್ನು, ಭವಿಷ್ಯತ್ ಕಾಲದ ಪ್ರಜ್ಞೆಯನ್ನು ನಿರೂಪಿಸುವ ಕೆಲಸ ಮಾಡಬೇಕೆಂದರು. ಕಾವ್ಯವೆಂಬುದು ಕಾಲದ ಹಿಡಿತದಲ್ಲಿ ಮಾರ್ದನಿಸಿದರೂ ಅದು ಝೇಂಕರಿಸಬೇಕಿರುವುದು ಸಹೃದಯನ ಎದೆಯಲ್ಲಿ, ದರ್ಶನೋಕ್ತಿಯಲ್ಲಿ.

ಕವಿಯ ಕೈಯಲ್ಲಿ ಕಾವ್ಯಕ್ಕೆ ಸೌಂದರ್ಯೋಪಾಸನೆ ಮುಟ್ಟಿದ ಕೂಡಲೇ ರಸವೊಸರುವಿಕೆ ಪ್ರಾರಂಭವಾಗುತ್ತದೆ. ಅದು ಭಿನ್ನ ಭಿನ್ನ ರಸಗಳಿಂದ ಕೂಡಿದ್ದಾಗಿರುತ್ತದೆ. ಕಾವ್ಯವು ಕರುಣಾ ರಸ ಮೊದಲಗೊಂಡು ಬೀಭತ್ಸ್, ಭಯಾನಕ, ಶೃಂಗಾರ, ಹಾಸ್ಯ, ಗಂಭೀರ, ಶಾಂತರಸಗಳನ್ನು ಉಣಬಡಿಸಿ ಎಲ್ಲ ಜನಾಂಗದ ಉನ್ನತಿಗೆ ಕಾರಣವಾಗಲಂತೆಯೇ ಸ್ವತಂತ್ರದ ಮನೋಸ್ಥೈರ್ಯದೊಟ್ಟಿಗೆ ಅವನು ಯಾವಾಗಲೂ ಎಚ್ಚರಗೊಂಡು ಕಾವ್ಯಬನಿಯೊಂದಿಗೆ ತನ್ನದೆಯಾದ ಲೋಕದೊಳಗೆ ವಿಹರಿಸುತ್ತಾನೆ ಮತ್ತು ವಿಚಾರ ಮಾಡುತ್ತಾನೆ.

ಸಹೃದಯನನ್ನು ಕಾವ್ಯದ ರಸವು ಆನಂದದೊಂದಿಗೆ ಎಚ್ಚರಿಕೆಯ ಹೆಜ್ಜೆ ಇಡುವಂತೆ, ಪ್ರಜ್ಞಾ ಪೂರ್ವಕನಾಗುವಂತೆ ಮಾಡುವುದು. ಹೀಗಾಗಿ ಸಹೃದಯನು ಕಾವ್ಯದ ಸ್ವಾಧಿಷ್ಟತೆ ಪಡೆಯುವುದಕ್ಕಿಂತ ಹೆಚ್ಚಾಗಿ ಒಳಿತನ್ನು ಬಯಸಿ ಲೇಸಾಗಿ ಪರಿವರ್ತಿತಗೊಳ್ಳುತ್ತಾನೆ. ಇದು ಕಾವ್ಯ ರಸದ ಪರಮ ಗುರಿಯು ಹೌದು. ಹೀಗಾಗಿ ಬೇಂದ್ರೆ ಅವರ ಕಾವ್ಯ ಮೀಮಾಂಸೆ ವಿಸ್ತಾರವಾದುದು ಮತ್ತು ಮಹತ್ವಪೂರ್ಣವಾದುದು. ಇವರ ಕಾವ್ಯ ಮೀಮಾಂಸೆ, ನಾದ ಮೀಮಾಂಸೆ. ಜೀವನ ಮೀಮಾಂಸೆ, ಸ್ವತಂತ್ರ ಮೀಮಾಂಸೆ ಮತ್ತು ಮಥನ ಮೀಮಾಂಸೆಯಾಗಿ ಜೀವನದ ಹಿಗ್ಗು, ತಗ್ಗು, ಮಾನವನ ಅಸ್ಥಿತ್ವದ ಗರಿ, ಗುರಿ ಎಲ್ಲವವನ್ನು ಧಾರೆಯೆರೆಯುವಂಥದ್ದು ಆಗಿದೆ.

"ಕಲ್ಲು ಸಕ್ಕರೆಯಯಂಥ ನಿನ್ನೆದೆಯು ಕರಗಿದರೆ, ಆ ಸವಿಯ ಹನಿಸು ಎನಗೆ" ಎನ್ನುವುದರೊಂದಿಗೆ ಬೇಂದ್ರೆಯವರು ಕಾವ್ಯ ಖಾಸಗಿಯಲ್ಲ; ಅದು ಸ್ವತಂತ್ರ ಎನ್ನುವುದನ್ನು ಪ್ರಸ್ತಾಪಿಸಿರುವರು. ಕಾವ್ಯ ಎಂಬುದು ರಸಾನ್ನವನ್ನು ನೀಡುವ ಸ್ವಾಧೀಷ್ಟಪಾಕವಾಗಿ ಜೀವನದ ಅರ್ಥಪಾಕಗಳನ್ನು ಹುಡುಕಿಕೊಡುತ್ತದೆ. ಬೇಂದ್ರೆಯವರ ಕಾವ್ಯ ಮೀಮಾಂಸೆಯ ದರ್ಶನದಲ್ಲಿ ಭಾರತೀಯ ದರ್ಶನವಿದ್ದರೂ, ಪ್ರಾಪಂಚಿಕ ಮಿಳಿತ, ಅಷ್ಟದಶ ವರ್ಣನೆ, ಚಕೋರ ಜಾತಕತನ, ವೈಜ್ಞಾನಿಕ ವೈಧಾನಿಕತೆ, ತಾಳ, ಲಯಗಳೆಲ್ಲವನ್ನು ದರ್ಶಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಮೂರ, ಜಿ.ಎಸ್. (2011). *ಭುವನದ ಭಾಗ್ಯ*. ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

- ಬುದ್ಧಣ್ಣ ಹಿಂಗಮಿರೆ. (1977). *ಇಳಿದು ಬಾ ತಾಯಿ: ಬೇಂದ್ರೆ ಅಭಿನಂದನಾ ಗ್ರಂಥ.* ಸಾಹಿತ್ಯ ಮಂಟಪ
- ದ.ರಾ.ಬೇಂದ್ರೆ. (1974). *ಸಾಹಿತ್ಯ ವಿರಾಟ್ ಸ್ವರೂಪ.* ಸಮಾಜ ಪುಸ್ತಕಾಲಯ
- ರಾಮಚಂದ್ರನ್, ಸಿ.ಎನ್. *ವಿಮರ್ಶೆಯ ಪರಿಬಾಷೆ.*
- ಶಂಕರ ಮೂಕಾಶಿ ಪುಣೇಕರ್. *ಬೇಂದ್ರೆ ಕಾವ್ಯಮೀಮಾಂಸೆ.*